**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.452/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರೇಮ್ | ಫ್ರಾಸಾ-3 |
| ತಂದೆಯ ಹೆಸರು | : ಸುರೇಶ್ | ಚಾಸಾ-3 |
| ವಯಸ್ಸು | : 21 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ 10.09.2025 |
| ವಾಸಸ್ಥಳ | : ಚಿಕ್ಕಮಗಳೂರು | |

**<u>:ಮುಖ್ಯ ವಿಚಾರಣೆ: ಫ್ರಾಕ್ಷ್ಯಾಸ.ಸ.ಅ. ರವರಿಂದ:</u>**

ಸಾಕ್ಷಿಯು ನಿಪಿ-1 ಮತ್ತು 14 ರ ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ನಿಪಿ-2, 3 ಮತ್ತು 15 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಗಳನ್ನು ನಿಪಿ-1(ಸಿ) ಮತ್ತು 14(ಬಿ) ಎಂದು ಗುರುತಿಸಲಾಯಿತು.

ದಿ.28.06.2023 ರಂದು ಬೆ.9.10 ರ ಸಮಯಕ್ಕೆ ಮೂಡಿಗೆರೆ ಪೋಲಿಸರು ನನಗೂ ಮತ್ತು ಚಾಸಾ-2 ರವರಿಗೆ ಕರೆ ಮಾಡಿ ಮೂಡಿಗೆರೆಯ ಮುದ್ರೆಮನೆ ಕಾಫೀ ಕ್ಯೂರಿಂಗ್ ಬಸ್ ಸ್ಟಾಪ್ ಬಳಿ ಕರೆದು ನಮಗೆ ನೋಟೀಸು ಕೊಟ್ಟು ಆರೋಪಿಯು ದನದ ಮಾಂಸ ಮಾರಾಟ ಮಾಡುತ್ತಿದ್ದ ಬಗ್ಗೆ ನಮ್ಮ ಸಹಿ ಪಡೆದು ಪೋಟೋಗಳನ್ನು ತೆಗೆದು ಆರೋಪಿಯ ಬಳಿ ಇದ್ದ ಹಳದಿ ಬಣ್ಣದ 5 ಕವರ್ ನೊಳಗೆ ಇದ್ದ ಮಾಂಸವನ್ನು ಪ್ಯಾಕ್ ಮಾಡಿ ಬೆ.10.10 ರ ಸಮಯಕ್ಕೆ ಪೋಲಿಸರು ವಶಕ್ಕೆ ಪಡೆದರು. ಅದೇದಿನ ಸ.5.00 ಗಂಟೆಯಿಂದ 6.30 ರವರೆಗೆ ಸದರಿ ಮಾಂಸವನ್ನು ಚಾಸಾ-12 ರವರ ಮೂಲಕ ಬೀಜುವಳ್ಳಿಯಲ್ಲಿ ಜೆಸಿಬಿ ಮೂಲಕ ಗುಂಡಿ ತೆಗೆಸಿ ಊಳಿಸಿದರು.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಜಿ.ಎ. ವಕೀಲರಿಂದ:</u>**

ದಿ.28.06.2023 ರ ಸಮಯಕ್ಕೆ ಮೂಡಿಗೆರೆ ಪಾಂಡುರಂಗ ಮೆಟಲ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ, ಆದರೆ ಆ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ. ಪಾಂಡುರಂಗ ಮೆಟಲ್ಸ್‌ನಲ್ಲಿ 5 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ನಾನು ಮತ್ತು ಚಾಸಾ-2 ರವರು ಹಿಂದೂಪರ ಸಂಘಟನೆಯ ಸದಸ್ಯರು ಎಂದರೆ ಸರಿ. ಮೂಡಿಗೆರೆ ಪೋಲಿಸರೊಂದಿಗೆ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. ಹಿಂದೂ ಸಂಘಟನೆಯ ವಿರುದ್ಧ ಪ್ರಕರಣಗಳಲ್ಲಿ ನಮ್ಮನ್ನು ಸಾಕ್ಷಿದಾರರಾಗಿ ಕರೆಯುತ್ತಾರೆ ಎಂದರೆ ಸರಿ. ಈ ಪ್ರಕಣವನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ಪ್ರಕರಣದಲ್ಲಿ ಸಾಕ್ಷಿದಾರನಾಗಿಲ್ಲ. ನಿಪಿ-1 ಮತ್ತು 14 ನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ಅವುಗಳನ್ನು ನಾನು ಸಂಪೂರ್ಣವಾಗಿ ಓದಿಲ್ಲ. ಆ ದಿನಕ್ಕೂ ಮೊದಲು ಆರೋಪಿಯ ಪರಿಚಯ ನನಗಿರಲಿಲ್ಲ. ಆರೋಪಿಯು ಎಲ್ಲಿ ಕೆಲಸ ಮಾಡುತ್ತಾರೆ ಹಾಗೂ ಎಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸ್ಥಳ ಮಹಜರ್ ಬರೆದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

ಆ ದಿನ ಬೆಳಗ್ಗೆ ಒಂದು ದಾಖಲೆಗೆ ಸಹಿ ಮಾಡಿದ್ದು ನಂತರ ಸಂಜೆ ಸಮಯಕ್ಕೆ ಒಂದು ದಾಖಲೆಗೆ

ಸಹಿ ಮಾಡಿದ್ದೇನೆ. ಆ ದಿನ ನಾನು ಪೋಲಿಸ್ ಠಾಣೆಗೆ ಹೋಗಿರಲಿಲ್ಲ. ನಾನು ಹೇಳಿದ ಕವರ್ ಗಳ ಮೇಲೆ ನನ್ನ ಸಹಿಯುಳ್ಳ ಚೀಟಿ ಅಂಟಿಸಿರಲಿಲ್ಲ. ಮೂಡಿಗೆರೆ ಹ್ಯಾಂಡ್ ಪೋಸ್ಟ್ ನಿಂದ ಜನ್ನಾಪುರದ ವರೆಗೂ ಇರುವ ರಸ್ತೆಯಲ್ಲಿ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಮಾಂಸವನ್ನು ಎಲ್ಲಿಂದ ತಂದಿರುವುದಾಗಿ ಪೋಲಿಸರು ನನ್ನ ಸಮಕ್ಷಮ ಆರೋಪಿಯನ್ನು ಕೇಳಿಲ್ಲ. ಆ ಮಾಂಸದ ಮೌಲ್ಯವನ್ನು ನಾನು ಹೇಳಿ ಬರೆಸಿಲ್ಲ. ಪೋಲಿಸರ ಕೋರಿಕೆಯಂತೆ ನಾನು ಸಹಿ ಮಾಡಿದ್ದೆ ಎಂದರೆ ಸರಿ. ನಾನು ಯಾವುದೇ ಸ್ಥಳಗಳಿಗೆ ಹೋಗದೇ ಇದ್ದರು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.